## ಜೋಗುಳದ ಹಾಡು

ಮಗು ಮಾತು ಕಲಿಯುವ ಮುನ್ನಿನ ಅವಸ್ಥೆಯನ್ನು ಗಮನಿಸಿದರೆ ಅದರ ಲಾಲನೆ ಪಾಲನೆಯ ಬಗೆಗೆ ಜನಪದರ ಮನೋಧರ್ಮ ಸಂವೇದನಾಶೀಲ ಕ್ರಿಯಾರೂಪಿಯಾಗಿದೆ. ರಚ್ಚೆ ಹಿಡಿದ ಮಗುವನ್ನು ರಮಿಸುವಾಗ, ನಿದ್ರೆಗೆ ಜಾರುವ ಮಗುವನ್ನು ಮಲಗಿಸುವಾಗ ಜನಪದರು ಬರೀ ತೊಟ್ಟಿಲು ತೂಗುವುದಿಲ್ಲ. ಅಥವಾ ಭುಜದ ಮೇಲೆ ಮಲಗಿಸಿ ಬರೀ ತಟ್ಟುತ್ತಾ ಮಲಗಿಸುವುದಿಲ್ಲ. ಮಕ್ಕಳ ಕಿವಿಗೆ ರಾಗಾಲಾಪನೆಯ ಕೆಲವು ಪದಗಳನ್ನು ಹಾಡುತ್ತಾರೆ. ಆ ಹಾಡುಗಳ ಲಯ ಹೇಗಿರುತ್ತದೆಂದರೆ, ತೂಗುವ ತೊಟ್ಟಿಲಿನ ಜೋಲಿಗೆ ಹೊಂದಿಕೊಂಡಂತೆ ಕೇಳುವ ಮಗುವಿನ ಕಿವಿಗೆ ಮಂಪರಿನ ಗತಿಲಯವಾಗುವಂತೆ ಪದಗಳನ್ನು ಹಾಡುತ್ತಾರೆ. 'ದೂರಿ ದೂರಿ ದುಕ್ಕಲಮ್ಮ ನಾರಿಕೇಳೆ ಗೋಪಿಕಂದ' – ಈ ಬಗೆಯ ಪದಗಳು ಅರ್ಥಕ್ಕಿಂತ ಲಯಕ್ಕೆ, ರಾಗಾಲಾಪಕ್ಕೆ ಹೊಂದಿದಂತೆ ರಚಿತವಾಗಿವೆ. ಮೇಲುನೋಟಕ್ಕೆ ಈ ದೂರಿಪದಗಳು ಯಾವುದೇ ಅರ್ಥವಿಲ್ಲದಂತೆ ಇವೆ. ಆದರೆ, ಅವುಗಳಲ್ಲಿನ ಅರ್ಥ ಮಗುವಿಗಲ್ಲ, ದೊಡ್ಡವರಿಗೆ ವೇದ್ಯವಾಗುವ ಉದ್ದೇಶಿತ ಗುಣದಿಂದ ಕೂಡಿರುತ್ತದೆ. ಅಂಕಗಣ ಛಂದೋರೂಪದ ಈ ಪದಗಳು ತೊಟ್ಟಿಲು, ಜೋಕಾಲಿ, ಜೋಲಿ ಇವುಗಳ ಜೀಕುವಿಕೆಗೆ, ತೂಗುವ ಗತಿಗೆ ಹೊಂದಿ ಹರಿವ ಗೀತಗುಣದಿಂದ ಕೂಡಿರುತ್ತವೆ. 'ಲಾಲಿ ಲಾಲಿ ದೂರಿ ದೂರಿ ಜೋಜೋ' ಈ ದನಿಮಾಧುರ್ಯದ ಪದಗಳಿಗೆ ಯಾವ ಅರ್ಥ ಹಚ್ಚಲಾದೀತು? ಮಗುವಿನ ಆ ಕ್ಷಣದ ಭಾವಮುಗ್ಧತೆಗೆ ಸಂಲಗ್ನಗೊಳ್ಳಬಹುದಾದ ಭಾವಗೀತೆ ಎನ್ನಬಹುದೇನೋ? ಬೇಂದ್ರೆಯವರು ಹೇಳುವಂತೆ 'ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತೆ' ಇದು.

## ಅರಿವು ಅನ್ನ

ಹಾಲೂಡಿಸುವುದರ ಜೊತೆಗೆ ಅನ್ನ ತಿನ್ನಿಸುವ ಹಂತಕ್ಕೆ ಮಗು ಬೆಳೆದಂತೆ ಮಗುವಿಗೆ ಕೇಳಿಸುವ ರಾಗಾಲಾಪಗಳಲ್ಲಿಯೂ ನಾವು ವಿಕಾಸಗತಿಯನ್ನು ಕಾಣಬಹುದು. ಮಗು ಅನ್ನ ತಿನ್ನುವಂತಾದಾಗ ಅದಕ್ಕೆ ಅನ್ನ ತಿನ್ನಿಸುವುದೂ ಒಂದು ಯಾಂತ್ರಿಕ ಕ್ರಿಯೆಯಂತೆ ನಡೆಯುವುದಲ್ಲ. ಏಕೆಂದರೆ ಯಾವ ಮಗುವೂ ತಾಯಿ ತುತ್ತನ್ನು ಬಾಯಿಗಿಡಲು ಬಂದಾಗ ಸುಲಭದಲ್ಲಿ ಅನ್ನವನ್ನು ತಿನ್ನುವುದಿಲ್ಲ. ಕಂದಮ್ಮಗಳನ್ನು ರಮಿಸಿ ಅನ್ನ ತಿನ್ನಿಸುವ ಹೊತ್ತಿಗೆ ಸಾಕು ಸಾಕೆನಿಸುತ್ತದೆ. ಆದರೆ, ಯಾವ ತಾಯಿಯೂ ಇದಕ್ಕೆ ಬೇಸರ ಮಾಡಿಕೊಳ್ಳುವುದಿಲ್ಲ. ಬೇಸರಿಸಿದಂತೆ ನಡೆದುಕೊಂಡರೆ ಮಗುವಿಗೆ ಉಣ್ಣಿಸಲಾಗುವುದಿಲ್ಲ. ಹೀಗಾಗಿ ಆಗೆಲ್ಲ ಮಗುವಿಗೆ ತಿನ್ನುವ ಆಸಕ್ತಿ ಮೊಳೆಯುವಂತೆ ಅದರ ಮನಸ್ಸನ್ನು ಅಣಿಗೊಳಿಸುತ್ತಾರೆ. ಒಂದೊಂದು ತುತ್ತನ್ನು ಬಾಯಿಗಿಡುವಾಗಲೂ 'ಇದು ಚಂದ್ರನ ತುತ್ತು' ಎಂದು ಆಕಾಶದ ಚಂದಮಾಮನನ್ನು ತೋರಿಸಿ ಬಾಯಿಗಿಡುತ್ತಾರೆ. ಹೀಗೆಯೇ 'ಇದು ಅಜ್ಜನ ತುತ್ತು, ಇದು ಅಜ್ಜಿಯ ತುತ್ತು, ಇದು ಅಪ್ಪನ ತುತ್ತು' – ಹೀಗೆ, ಅಕ್ಕ ಅಣ್ಣ ಮುಂತಾಗಿ ಬಳಗ ಬಳಿಸಾಲಿನ ಸಂಬಂಧಗಳ ಹೆಸರು ಹೇಳುತ್ತಾ ಮಗುವಿನ ಬಾಯಿಗೆ ತುತ್ತನ್ನಿಡುತ್ತಾರೆ. ಇಲ್ಲಿ ತುತ್ತು ತುತ್ತಿಗೂ ಕಟ್ಟಿಕೊಳ್ಳುವ ಶಬ್ದಬಂಧ ಬಳಗ ಬಳಿಸಾಲ ಅನುಬಂಧವೇ ಆಗಿ ಮಗುವಿನ ಭಾವಕೋಶದಲ್ಲಿ ಈ ಅನುಬಂಧ ಬೇರೂರಿದ ನೆನಪಾಗಿ ಬಿತ್ತಲಾಗುತ್ತದೆ. ಜೊತೆಗೆ ಅದರ ಸುತ್ತಲಿನ ಅನುದಿನದ ಆಪ್ತ ಹೆಸರುಗಳ ನೆಲೆಯಲ್ಲಿ ಅದರ ಭಾವಸಿರಿಯ ವಿಕಾಸಕ್ಕೆ ಇದು ಕಾರಣವಾಗುತ್ತದೆ. ಇದು ಬೆಳೆ ಬೆಳೆದಂತೆ ತಿನ್ನುವ ಅನ್ನಕ್ಕೂ ಉಚ್ಚರಿಸುವ ತಾಯಿಯ ಬಾಯಿಯ ಪದಪುಂಜಕ್ಕೂ ಒಂದು ಅವಿನಾಭಾವ ಕ್ರಿಯೆ ಬೆಳೆದಂತೆ, ಅರಿವು ಅನ್ನಗಳ ಉಣಿಸಾಗಿ ಅದು ಮಗುವಿನ ದೈಹಿಕ ಬೆಳವಣಿಗೆ ಮಾನಸಿಕ ಬೆಳವಣಿಗೆ ಎರಡಕ್ಕೂ ಸಂಬಂಧ ಪಡೆದ ಕ್ರಿಯೆಯಾಗಿ ಅದು ಮಗುವಿನ ಭಾವಕೋಶದ ಭಾಗವಾಗುತ್ತದೆ. ಎಷ್ಟರಮಟ್ಟಿಗೆ ಇದು ರೂಢಿಯಾಗುತ್ತದೆಂದರೆ ಮಗು ತಾಯಿಯು ಮೌನವಾಗಿ ತಿನಿಸಲು ಬಂದರೆ ಬಾಯಿ ತೆಗೆಯದ ಅಭ್ಯಾಸಾನುಬಂಧ ಕ್ರಿಯೆಯಾಗಿ ಆಚರಿತವಾಗುತ್ತದೆ. ಇದು ಎಲ್ಲ ತಾಯಿ ಮಗುವಿನ ಸಂಬಂಧಗಳ ಪರಿಪಾಲಿತ ಆಚರಣೆ ಆಗದೆ ಇರಬಹುದು. ಆದರೆ, ಜಾನಪದ ಲೋಕದಲ್ಲಿನ ಸಮಷ್ಟಿಪ್ರಜ್ಞೆಯ ಪ್ರತೀಕವಾದಂತೆ ಇದು ಜನಪದರ ಬದುಕಿನ ಭಾಗವಾಗಿ ಅಭಿವ್ಯಕ್ತಿ ಪಡೆದಿದೆ. ಅಂಥ